ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಗುರುವಾರ, ದಿನಾಂಕ ೧೨ನೇ ಮಾರ್ಚಿ ೧೯೮೭, ಫಾಲ್ಗುಣ ೨೧, ೧೯೦೮ ಶಕ

ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಸದನವು ಬೆಳಿಗ್ಗೆ ೧೧-೦೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಅವರು ಪೀಠವನ್ನಲಂಕರಿಸಿದರು.]

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ನೀಡಲಾದ ಬಾಯಿಮಾತಿನ ಉತ್ತರಗಳು

ಅಧ್ಯಕ್ಷರು.—೬೭೮ನೇ ಪ್ರಶ್ನೆಯನ್ನು ಅನಂತರ ತೆಗೆದುಕೊಳ್ಳುತ್ತೇನೆ.

ಕಚ್ಚಾ ರೇಷ್ಮೆ ಒದಗಿಸುವ ಬಗ್ಗೆ

೧೧೫೮. ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ).—ಮಾನ್ಯ ಕೈಗಾರಿಕಾ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಗುಬ್ಬಿ ತಾಲ್ಲೂಕು ಕಡಬಾ ಹೋಬಳಿ ಕಲ್ಲೂರು ಗ್ರಾಮದಲ್ಲಿ ರಾಜ್ಯದ ಕೈಮಗ್ಗದ ಅಭಿವೃದ್ಧಿ ನಿಗಮದವರು ರೇಷ್ಮೆ ಸೀರೆಗಳನ್ನು ತಯಾರು ಮಾಡುವ ಎಷ್ಟು ಮಗ್ಗಗಳನ್ನು ಸ್ಥಾಪಿಸ ಲಾಗಿದೆ. ಹಾಗೂ ಇವುಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ಸಂಖ್ಯೆ ಎಷ್ಟು;

(ಆ) ಸದರಿ ಕೈಮಗ್ಗಗಳಿಗೆ ಕಚ್ಚಾ ರೇಷ್ಮೆಯನ್ನು ಸರಿಯಾಗಿ ಕೊಡುತ್ತಿಲ್ಲವೆಂದು ನೇಕಾರ ರಿಂದ ಸರ್ಕಾರಕ್ಕೆ ದೂರುಗಳು ಬರುತ್ತಿರುವುದು ನಿಜವಲ್ಲವೆ ;

(ಇ) ನೇಕಾರರಿಗೆ ನೇಯ್ಗೆ ಮಾಡಿದ ಬಟ್ಟೆಗೆ ಮೀಟರಿಗೆ ಎಷ್ಟು ಹಣದಂತೆ ಕೊಡಲಾಗುತ್ತಿದೆ. ಮತ್ತು ಸಕಾಲದಲ್ಲಿ ಕೊಡಲಾಗುತ್ತಿದೆಯೆ ;

(ಈ) ಸದರಿ ಊರಿಗೆ ವಿದೇಶಿ ಬೇಡಿಕೆ ಇರುವ ರಫ್ತು ದರ್ಜೆಯ ಬಟ್ಟೆ ತಯಾರು ಮಾಡುವುದಕ್ಕೆ ಸರಿಯಾದ ರೀತಿಯಲ್ಲಿ ಪ್ರೋತ್ಸಾಹ ಕೊಡುತ್ತಿಲ್ಲವೆಂದು ದೂರು ಬಂದಿರುವುದು ನಿಜವಲ್ಲವೆ ;

(ಉ) ಈಗಲಾದರೂ ನೇಕಾರರಿಗೆ ಒಳ್ಳೆ ರೇಷ್ಮೆ ಒದಗಿಸಲು ಸರ್ಕಾರದವರು ಕ್ರಮ ತೆಗೆದು ಕೊಳ್ಳುವರೆ ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಸಚಿವರು).—

(ಅ) ೩೧೫ ಮಗ್ಗಗಳು. ಈ ಮಗ್ಗಗಳಲ್ಲಿ ೩೧೫ ಕುಟುಂಬಗಳು ಕೆಲಸ ಮಾಡುತ್ತಿವೆ.

(ಆ) ನಿಜವಲ್ಲ. ಕಚ್ಚಾ ರೇಷ್ಮೆಯನ್ನು ಸರಬರಾಜು ಮಾಡಲು ವ್ಯವಸ್ಥೆ ಮಾಡಲಾಗಿದೆ.

(ಇ) ಈ ಕೆಳಗಿನಂತೆ ನೇಯ್ಗೆ ದರ ಸರಕಾಲದಲ್ಲಿ ನೀಡಲಾಗುತ್ತಿದೆ.

		ಮೀಟರಿಗೆ ರೂ.
೧)	ಸಾದಾ ರೇಷ್ಮೆಬಟ್ಟೆ ನೇಯ್ಗೆ	೬–೫೦
೨)	ರಫ್ತು ದರ್ಜೆ ರೇಷ್ಮೆಬಟ್ಟೆ ನೇಯ್ಗೆಗೆ	೭–೦೦
೩)	ರೇಷ್ಮೆಬಟ್ಟೆ ಚೌಕಾಂಶ (ನಮೂನೆ ಆಧಾರದ ಮೇಲೆ) ಉತ್ಪಾದನೆಗೆ	೦೫–೦೦
೪)	ರೇಷ್ಮೆ ಸೀರೆ ಉತ್ಪಾದನೆಗೆ	೧೫೦–೦೦ (ಸೀರೆ ೧ಕ್ಕೆ.)

(ಈ) ನಿಜವಲ್ಲ.

(ಉ) ಒಳ್ಳೆಯ ರೇಷ್ಮೆ ನೂಲನ್ನು ಒದಗಿಸಲಾಗುತ್ತಿದೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆ ಏಕೆ ಹಾಕಿದೆಯೆಂದರೆ ಕಲ್ಲೂರು ಗ್ರಾಮದಲ್ಲಿ ಸುಮಾರು ೩೧೫ ಕುಟುಂಬಗಳು ಕೈಮಗ್ಗದಲ್ಲಿ ಖಾಯಂ ಆಗಿ ಕೆಲಸ ಮಾಡುತ್ತಿವೆ ಎಂದು ಹೇಳಿದ್ದೀರಿ. ಅಲ್ಲಿ ೩ ಸಾವಿರ ಜನರಿಗಿಂತ ಮೇಲಿದ್ದಾರೆ. ಅವರ ಕಷ್ಟ ಏನೆಂದರೆ, ಅಲ್ಲಿ ಯಾರು ಟೆಕ್ನಿಕಲ್ ಆಫೀಸರನ್ನು ಇಟ್ಟಿದ್ದೀರಿ, ಈಗ ಅವರ ಟ್ರಾನ್ಸ್‌ಫರ್ ಆಗಿದೆ, ಅವರು ಇದ್ದಾಗ ನೇಕಾರರಿಗೆ ೧೫ ದಿವಸಕ್ಕೆ ಸಾಕಾಗದೆ ಇರುವಷ್ಟು ಸಿಲ್ಕ್ ಕೊಡುವುದು ಹಾಗೂ ಕೊಟ್ಟಿರುವ ಸಿಲ್ಕ್ ಸರಿಯಾಗಿ ಇರುತ್ತಾ ಇರಲಿಲ್ಲ ಮೀಟರ್‌ಗೆ ೭–೮ ರೂಪಾಯಿ ಕೊಡುವ ಕಡೆ ೫ ರೂಪಾಯಿಯನ್ನು ಅದೂ ೧೫–೨೦ ದಿವಸ ಆದ ಮೇಲೆ ಕೊಡುತ್ತಿದ್ದರು, ಹೀಗಾಗಿ ನೇಕಾರರಿಗೆ ಕೆಲಸವೂ ಇಲ್ಲ, ಮಾಡಿದ ಕೆಲಸಕ್ಕೆ ಕೂಲಿಯನ್ನೂ ಸರಿಯಾಗಿ ಕೊಡುತ್ತಾ ಇರಲಿಲ್ಲ. ಈ ಪ್ರಶ್ನೆ ಹಾಕಿದ ಮೇಲೆ ಈಗ ಅವರನ್ನು ಟ್ರಾನ್ಸ್‌ಫರ್ ಮಾಡಿದ್ದಾರೆ ಹಾಗೂ ಮತ್ತೆ ಒಬ್ಬರನ್ನು ಹಾಕಿದ್ದಾರೆ. ಅವರನ್ನು ಮತ್ತೆ ಎತ್ತಂಗಡಿ ಮಾಡಲಿಕ್ಕೆ ಪ್ರಯತ್ನ ಮಾಡಿದ್ದಾರೆ. ಕನಕಶೆಟ್ಟರು ಎಂದು ಅವರ ಹೆಸರು. ಈ ಟೆಕ್ನಿಕಲ್ ಆಫೀಸರನ್ನು ಟ್ರಾನ್ಸ್‌ಫರ್ ಮಾಡುವುದಕ್ಕೆ ಪ್ರಯತ್ನ ನಡೆಯುತ್ತಿದೆ. ದಯವಿಟ್ಟು ಅವರನ್ನು ಅಲ್ಲೇ ಉಳಿಸಿಕೊಡುತ್ತೀರಾ ?

ಶ್ರೀ ಜೆ.ಹೆಚ್. ಪಟೇಲ್.—ಪರಿಶೀಲನೆ ಮಾಡುತ್ತೇನೆ.

ಕಾರ್ಖಾನೆಗಳಲ್ಲಿ ಸ್ಥಳೀಯರಿಗೆ ಆದ್ಯತೆಯ ಬಗ್ಗೆ

೯೪೫. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಮಾನ್ಯ ಕೈಗಾರಿಕಾ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧. ಬೆಳಗಾಂನಲ್ಲಿರುವ ಹಿಂದೂಸ್ತಾನ ಲ್ಯಾಟಿಕ್ಸ್ ಕಾರ್ಖಾನೆಯಲ್ಲಿ ಬೆಳಗಾಂ ಜಿಲ್ಲೆಯ ಕೆಲಸಗಾರರಿಗೆ ಆದ್ಯತೆ ದೊರೆಯುತ್ತಿಲ್ಲವೆಂಬ ದೂರು ಸರ್ಕಾರದವರಿಗೆ ಬಂದಿದೆಯೇ ?

೨. ಈ ಕಾರ್ಖಾನೆಯಲ್ಲಿರುವ ಅಧಿಕಾರಿಗಳು ಹಾಗೂ ಕಾರ್ಮಿಕರ ಸಂಖ್ಯೆ ಎಷ್ಟು ? ಅ ಪೈಕಿ ರಾಜ್ಯದವರೆಷ್ಟು ಜನರಿದ್ದಾರೆ ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಸಚಿವರು).—

೧. ಬಂದಿದೆ. ಇನ್ನು ಮುಂದೆ ಕಾರ್ಖಾನೆಯಲ್ಲಿ ಹೊದ್ದೆಗಳ ಭರ್ತಿ ಮಾಡುವ ಕಾಲದಲ್ಲಿ ಸ್ಥಳೀಯರಿಗೆ ಆದ್ಯತೆ ನೀಡಬೇಕೆಂದು ತಿಳಿಸಲಾಗಿದೆ.

೨. ಈ ಕಾರ್ಖಾನೆಯಲ್ಲಿ ೧೬ ಜನರಿಗೆ ಉದ್ಯೋಗ ಕಲ್ಪಿಸಿದ್ದು ಇದರಲ್ಲಿ ೫ ಜನ ಹೊರಗಡೆಯವರಾಗಿದ್ದು ೧೧ ಜನ ಮಾತ್ರ ಸ್ಥಳೀಯರಾಗಿರುತ್ತಾರೆ. ೧೧ ಜನರ ಎವರಗಳನ್ನು ಲಗತ್ತಿಸಲಾಗಿದೆ.